# ಕರ್ನಾಟಕ ಸರ್ಕಾರ

**ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ರಾಮನಗರ**

# ಮಾಹಿತಿ ಹಕ್ಕು ಕಾಯಿದೆ 2005ರ ಅಧಿನಿಯಮ 4(1) (ಎ)ಮತ್ತು 4(1) (ಬಿ)ರ 31-03-2019 ರ ಅಂತ್ಯಕ್ಕೆ ವಿವರಗಳು

**ಕಾರ್ಯದರ್ಶಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ರಾಮನಗರ**

**ಮಾಹಿತಿ ಹಕ್ಕು ಕಾಯ್ದೆ 2005**

**4(1)ಎ ಮತ್ತು 4(1)ಬಿ ಅಡಿಯಲ್ಲಿ ಅಧಿಸೂಚನೆ.**

*****

**1988 ರ ಮೋಟಾರು ವಾಹನಗಳ ಕಾಯಿದೆ, 1989 ರ ಕೇಂದ್ರ ಮತ್ತುಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1988 ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯಿದೆ ಮತ್ತು ನಿಯಮಗಳು, ಕರ್ನಾಟಕ ನಾಗರೀಕ ಸೇವಾ ನಿಯಮಗಳು ಹಾಗೂ ತತ್ಸಂಬಂಧಿತ ಪೂರಕ ನಿಯಮಗಳು ಮತ್ತು ಅಧಿಸೂಚನೆಗಳು, ಹಾಗೂ ಆದೇಶಗಳ ಪ್ರಕಾರ ಕಛೇರಿಯಲ್ಲಿ ನಿರ್ವಹಿಸಿರುವ ದಾಖಲೆಗಳು ಮತ್ತು ಕಡತಗಳ ಪಟ್ಟಿ.**

ಕಛೇರಿಯಲ್ಲಿ ನೊಂದಾಯಿತವಾಗಿರುವ ಮತ್ತು ಕಛೇರಿಗೆ ಬೇರೆ ಪ್ರದೇಶಗಳಿಂದ ಮತ್ತು ರಾಜ್ಯಗಳಿಂದ ವಲಸೆ ಬಂದಿರುವ ವಾಹನಗಳ ದಾಖಲೆಗಳನ್ನು ಶ್ರೇಣಿಗಳಿಗೆ ಅನುಗುಣವಾಗಿ ವಿಂಗಡಿಸಿ ಜೋಡಣೆ ಮಾಡಿ ಕಛೇರಿಯ ಅಭಿಲೇಖಾಲಯದಲ್ಲಿ ನಿರ್ವಹಿಸಲಾಗಿದೆ. ಈ ದಾಖಲೆಗಳಿಗೆ ಅನುಸೂಚಿ (ಇಂಡೆಕ್ಸ್) ತಯಾರಿಸಲಾಗಿದೆ. ಕಛೇರಿಯ ಕೆಲಸಗಳನ್ನು ಹಾಗೂ ದಾಖಲೆಗಳನ್ನು ಗಣಕೀಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.ಅದರಂತೆ ಹೊಸ ವಾಹನಗಳ ನೊಂದಣಿ ಪತ್ರಗಳನ್ನು ಮತ್ತು ಹೊಸ ಚಾಲನಾ ಪರವಾನಗಿ ಪತ್ರಗಳನ್ನು ಸ್ಮಾರ್ಟ್ ಕಾರ್ಡ್ ರೂಪದಲ್ಲಿ ವಿತರಿಸಲಾಗುತ್ತಿದೆ. ಇದರ ಜೊತೆಗೆ ಕಛೇರಿಗೆ ಸಂಬಂಧಿಸಿದ ಮಾಹಿತಿ ಹಾಗೂ ದಾಖಲೆಗಳ ವಿವರಗಳನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸುವ ಕ್ರಮವೂ ಸಹಿತ ಪ್ರಗತಿಯಲ್ಲಿರುತ್ತದೆ. ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಪ್ರತಿ ದಿನ ಹಲವಾರು ವಾಹನಗಳ, ಚಾಲನಾ ಪರವಾನಗಿಗಳ ಮತ್ತು ರಹದಾರಿಗಳ ದಾಖಲೆಗಳು ಒಂದು ಕಛೇರಿಯಿಂದ ಮತ್ತೊಂದು ಕಛೇರಿಗೆ ವರ್ಗಾವಣೆ ಆಗುತ್ತಿರುತ್ತದೆ ಹಾಗೂ ಅದೇ ರೀತಿಯಲ್ಲಿ ಬೇರೆ ಕಛೇರಿಗಳು ಮತ್ತು ರಾಜ್ಯಗಳಿಂದ ಈ ಕಛೇರಿಗೆ ವರ್ಗಾವಣೆಯಾಗಿ ಬರುತ್ತಿರುತ್ತವೆ. ಇದರಿಂದಾಗಿ ಈ ಅಧಿಸೂಚನೆಯಡಿಯಲ್ಲಿ ಪ್ರಕಟವಾಗಿರುವ ದಾಖಲೆಗಳಲ್ಲಿ ಪ್ರತಿದಿನ ಬದಲಾವಣೆ ಆಗುತ್ತಿರುತ್ತದೆ ಎಂಬ ಅಂಶವನ್ನು ಸಾರ್ವಜನಿಕರು ಪ್ರಮುಖವಾಗಿ ಗಮನಿಸಬೇಕಾಗಿದೆ.